ಮಾಡುವುದರ ಮೂಲಕ ಹಾಯಿಸಲಾಗುತ್ತದೆ ಕಾಲುವೆಗಳ ಮುಖೇನ ನೀರು ಹಾಯಿಸಲು ಸಾಧ್ಯವಿರುವೆಡೆ ಸದರಿ ಕ್ರಮವನ್ನು ಅನುಸರಿಸಲಾಗುವುದು

ಇ) ಈ ಯೋಜನೆಯನ್ನು ಜಲಮೂಲಗಳ ಅಂತರ್ಜಲ ಹೆಚ್ಚಿಸಲು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ರೂಪಿಸಲಾಗಿದೆ

ಈ) ಗದಗ ಜಿಲ್ಲೆಯಲ್ಲಿ ಈ ತೆರನಾದ ಕಾಮಗಾರಿಗಳನ್ನು ತಾತ್ಕಾಲಿಕ ವ್ಯವಸ್ಥೆಗಾಗಿ ಅನುಷ್ಠಾನಗೊಳಿಸಲಾಗಿದೆ ಹಾವೇರಿ ಜಿಲ್ಲೆಯಲ್ಲೂ ಈ ರೀತಿಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುತ್ತಿದೆ

**ಚಾಮರಾಜನಗರದ ಪದವಿಪೂರ್ವ ಕಾಲೇಜುಗಳು**

28 (527) ಶ್ರೀ ಎ ಆರ್ ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ಹಾಗೂ ಚಾಮರಾಜನಗರ ತಾಲ್ಲೂಕಿನಾದ್ಯಂತ ಇರುವ ಪದವಿ ಪೂರ್ವ ಕಾಲೇಜುಗಳು ಹಾಗೂ ಅವುಗಳ ಹೆಸರುಗಳನ್ನು ತಿಳಿಸುವುದು

ಆ) ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿ ನಿಯರುಗಳ ಸಂಖ್ಯೆ

ಇ) ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತಹ ಶಿಕ್ಷಕರು/ ಉಪನ್ಯಾಸಕರುಗಳು ಇದ್ದಾರೆಯೇ ಇಲ್ಲದಿದ್ದಲ್ಲಿ ಯಾವ ಯಾವ ಉಪನ್ಯಾಸಕರುಗಳ ಹುದ್ದೆ ಯಾವ ಯಾವ ಕಾಲೇಜುಗಳಲ್ಲಿ ಖಾಲಿ ಇವೆ

ಈ) ಚಾಮರಾಜನಗರ ಕೇಂದ್ರಸ್ಥಾನ ಹಾಗೂ ತಾಲ್ಲೂಕಿನಾದ್ಯಂತ ಎಷ್ಟು ಪ್ರೌಢ ಶಾಲೆಗಳು ಇವೆ ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಸಂಖ್ಯೆ ಎಷ್ಟು? (ಗ್ರಾಮವಾರು ವಿವರ ನೀಡುವುದು)

ಉ) ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳ ಸಂಖ್ಯೆಗೆ ಅನುಗುಣವಾಗಿ ಪದವಿ ಪೂರ್ವ ಕಾಲೇಜುಗಳು ಇವೆಯೇ ಇಲ್ಲದಿದ್ದಲ್ಲಿ ಇನ್ನಷ್ಟು ಪದವಿ ಪೂರ್ವ ಕಾಲೇಜುಗಳು ಬೇಕಾಗುವುದು, ಮಂಜೂರಾತಿ ಮಾಡುವುದಿದ್ದಲ್ಲಿ ಆದ್ಯತೆಯ ಮೇರೆಗೆ ಪ್ರಥಮವಾಗಿ ಚಂದಕವಾಡಿ ಹೋಬಳಿ ಕೇಂದ್ರ ಸ್ಥಾನದಲ್ಲಿ ಪದವಿ ಪೂರ್ವ ಕಾಲೇಜು ಮಂಜೂರಾತಿ ಮಾಡಲಾಗುವುದೇ?

ಪ್ರೋ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ) ಚಾಮರಾಜನಗರ ಕೇಂದ್ರಸ್ಥಾನದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ –05

01 J S S ಮಹಿಳಾ ಪದವಿ ಪೂರ್ವ ಕಾಲೇಜು ಚಾಮರಾಜನಗರ (ಎನ್‌ಸಿ–22)

02 ಶ್ರೀ ರಾಮಚಂದ್ರ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–132)

03 ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–56)

04 ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–92)

05 ಸೇವಾಭಾರತಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–128)

ಚಾಮರಾಜನಗರ ತಾಲ್ಲೂಕಿನಲ್ಲಿರುವ ಕಾಲೇಜುಗಳ ಸಂಖ್ಯೆ – **03**

01 ಸರ್ಕಾರಿ ಪದವಿ ಪೂರ್ವ ಕಾಲೇಜು, ಹರವೆ, ಚಾಮರಾಜನಗರ ತಾಲ್ಲೂಕು (ಎನ್‌ಸಿ–58)

02 ಸರ್ಕಾರಿ ಪದವಿ ಪೂರ್ವ ಕಾಲೇಜು, ವೆಂಕಟಯ್ಯನ ಛತ್ರ, ಚಾಮರಾಜನಗರ ತಾ(ಎನ್‌ಸಿ–66)

03 ಸರ್ಕಾರಿ ಎಂ ಸಂಗಶೆಟ್ಟಿ ಪೂರ್ವ ಕಾಲೇಜು ಕುದೂರು ಚಾಮರಾಜನಗರ ತಾ (ಎನ್‌ಸಿ–62)

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ | ಒಟ್ಟು |
|---|---|---|---|---|
| 01 | J S S ಮಹಿಳಾ ಪದವಿ ಪೂರ್ವ ಕಾಲೇಜು, ಚಾಮರಾಜನಗರ | 343 | 276 | 619 |
| 02 | ಶ್ರೀ ರಾಮಚಂದ್ರ ಪದವಿ ಪೂರ್ವ ಕಾಲೇಜು ಚಾಮರಾಜನಗರ | 45 | 77 | 122 |
| 03 | ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಚಾಮರಾಜನಗರ | 442 | 261 | 703 |
| 04 | ಬಾಲಕಿಯರ ಸರ್ಕಾರಿ ಪ ಪೂರ್ವ ಕಾಲೇಜು ಚಾಮರಾಜನಗರ | 171 | 99 | 270 |
| 05 | ಸರ್ಕಾರಿ ಪ ಪೂ ಕಾಲೇಜು ಹರವೆ ಚಾಮರಾಜನಗರ ತಾಲ್ಲೂಕು | 120 | 131 | 251 |
| 06 | ಸರ್ಕಾರಿ ಪ ಪೂ ಕಾಲೇಜು ವೆಂಕಟಯ್ಯನ ಛತ್ರ ಚಾಮರಾಜನಗರ ತಾ | 97 | 79 | 176 |
| 07 | ಸರ್ಕಾರಿ ಎಂ ಸಂಗಶೆಟ್ಟಿ ಪ ಪೂ ಕಾ ಕುದುರು ಚಾಮರಾಜನಗರ ತಾ | 245 | 154 | 399 |
| 08 | ಸೇವಾಭಾರತಿ ಪದವಿ ಪೂರ್ವ ಕಾಲೇಜು ಚಾಮರಾಜನಗರ | 100 | 73 | 173 |

ಇ) ಇಲ್ಲ

ಖಾಲಿ ಇರುವ ಹುದ್ದೆಗಳು

01 ಸರ್ಕಾರಿ ಪದವಿ ಪೂರ್ವ ಕಾಲೇಜು ಹರವೆ ಚಾಮರಾಜನಗರ ತಾಲ್ಲೂಕು ಕನ್ನಡ ಇತಿಹಾಸ, ರಾಜ್ಯಶಾಸ್ತ್ರ

02 ಸರ್ಕಾರಿ ಪದವಿ ಪೂರ್ವ ಕಾಲೇಜು ಕುದೇರೆ ಚಾಮರಾಜನಗರ ತಾ ಗಣಿತ

ಈ) ಚಾಮರಾಜನಗರ ಕೇಂದ್ರಸ್ಥಾನ–02

ತಾಲ್ಲೂಕಿನಾದ್ಯಂತ 18 ಪ್ರೌಢಶಾಲೆಗಳು ಇರುತ್ತದೆ

ಪ್ರೌಢಶಾಲೆಗಳ ಪಟ್ಟಿ ಹಾಗೂ ಮಕ್ಕಳ ಸಂಖ್ಯೆಯ ವಿವರ ಅನುಬಂಧ– 01 ರಲ್ಲಿ ಇರಿಸಿದೆ

ಉ) ಪ್ರಶ್ನೆ ಅ ಉತ್ತರದಲ್ಲಿ ನಮೂದಿಸಿರುವ ಕಾಲೇಜುಗಳ ಪೈಕಿ ಕ್ರಮ ಸಂಖ್ಯೆ 2,5,6 ಮತ್ತು 8 ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 150 ಕ್ಕಿಂತ ಕಡಿಮೆ ಇರುತ್ತದೆ ಇವುಗಳ ಜೊತೆಗೆ ಮತ್ತೊಂದು ಪದವಿ ಪೂರ್ವ ಕಾಲೇಜನ್ನು ಮಂಜೂರಾತಿ ಮಾಡಿದಲ್ಲಿ ಹಾಲಿ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವದಲ್ಲದೆ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತದೆ ಅಲ್ಲದೆ ಹೊಸದಾಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು 2003–2004ನೇ ಸಾಲಿನಲ್ಲಿ ಆಯವ್ಯಯ ಅವಕಾಶ ಕಲ್ಪಿಸಿಲ್ಲವಾದ್ದರಿಂದ ಚಂದಕವಾಡಿ ಹೋಬಳಿಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅವಶ್ಯಕವಾಗಿಲ್ಲವಾದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ

ಅನುಬಂಧ - I

| ಕ್ರಮ ಸಂಖ್ಯೆ | ಸರ್ಕಾರಿ ಪ್ರೌಢ ಶಾಲೆಯ ಹೆಸರು | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | 2 | 3 | 4 | 5 |
| 01 | ಸರ್ಕಾರಿ ಬಾಲಕರ ಪ ಪೂರ್ವ ಕಾಲೇಜು ಚಾಮರಾಜನಗರ | 536 | — | 536 |
| 02 | ಸರ್ಕಾರಿ ಬಾಲಕಿಯರ ಪ ಪೂ ಕಾಲೇಜು ಚಾಮರಾಜನಗರ | — | 763 | 763 |
| 03 | ಚಂದಕವಾಡಿ | 391 | 335 | 726 |
| 04 | ಸಂತೇಮರಳ್ಳಿ | 244 | 207 | 451 |
| 05 | ದೊಡ್ಡರಾಯಪೇಟೆ | 119 | 86 | 205 |
| 06 | ಅಮಚವಾಡಿ | 184 | 159 | 343 |
| 07 | ಆಲೂರು | 295 | 184 | 479 |
| 08 | ಹೊಂಗನೂರು | 199 | 253 | 432 |
| 09 | ಬದನಗುಪ್ಪೆ | 129 | 123 | 252 |
| 10 | ನಂಜೇದೇವನಪುರ | 170 | 145 | 315 |
| 11 | ಹರದನಹಳ್ಳಿ | 191 | 182 | 373 |
| 12 | ಮಂಗಲ | 122 | 114 | 236 |
| 13 | ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿವೆ | 306 | 253 | 559 |
| 14 | ಕುದೇರು | 228 | 236 | 464 |
| 15 | ವೆಂಕಟಯ್ಯನಚತ್ರ | 293 | 195 | 488 |
| 16 | ತಮಡಹಳ್ಳಿ | 101 | 89 | 190 |
| 17 | ಯಾರಗನಹಳ್ಳಿ | 58 | 81 | 139 |
| 18 | ಗೂಳಿಪುರ | 69 | 59 | 128 |
| 19 | ಯರಗನಹಳ್ಳಿ | 77 | 52 | 129 |
| 20 | ನವಿಲೂರು | 48 | 47 | 95 |
| | ಒಟ್ಟು | 4167 | 3639 | 7806 |

**ಭಟ್ಕಳ ತಾಲ್ಲೂಕಿಗೆ ಪದವಿ ಪೂರ್ವ ಕಾಲೇಜು ಮಂಜೂರಾತಿ**

29 (78) ಶ್ರೀ ನಾಯಕ್ ಜೆ ಡಿ (ಭಟ್ಕಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ